# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1347 |
| 2) ಸದಸ್ಯರ ಹೆಸರು | : | ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರ ಕ್ಷೇತ್ರ) |
| 3) ಉತ್ತರಿಸುವ ದಿನಾಂಕ | : | 18.12.2025 |
| 4) ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ತೆರಿಗೆ ರೂಪದಲ್ಲಿ ಹಂಚಿಕೆ ಆಗಿರುವ ಹಣವೆಷ್ಟು; ತೆರಿಗೆ ರೂಪದಲ್ಲಿ ಬರಬೇಕಾದ ಹಣವೆಷ್ಟು:</td><td>ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸ್ವೀಕೃತವಾಗಿರುವ ತೆರಿಗೆ ಹಂಚಿಕೆಯ (devolution) ವಿವರಗಳು ಕೆಳಕಂಡಂತಿದೆ.<br>ರೂ. ಕೋಟಿಗಳಲ್ಲಿ
<table>
<tr><th>ಆರ್ಥಿಕ ವರ್ಷ</th><th>ರಾಜ್ಯಕ್ಕೆ ಸ್ವೀಕೃತವಾಗಿರುವ ತೆರಿಗೆ ಹಂಚಿಕೆ</th></tr>
<tr><td>2020-21</td><td>21,694</td></tr>
<tr><td>2021-22</td><td>33,284</td></tr>
<tr><td>2022-23</td><td>34,596</td></tr>
<tr><td>2023-24</td><td>41,193</td></tr>
<tr><td>2024-25</td><td>46,933</td></tr>
</table></td></tr>
<tr><td>ಆ)</td><td>ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಸಹಾಯಧನ ಬಿಡುಗಡೆಯಾದ ಮೊತ್ತವೆಷ್ಟು; ಬಿಡುಗಡೆಗೆ ಬಾಕಿ ಇರುವ ಹಣವೆಷ್ಟು: ಬಿಡುಗಡೆಗೆ ಬಾಕಿ ಇದ್ದಲ್ಲಿ ಕಾರಣಗಳೇನು:</td><td>ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ ಸಹಾಯಾನುದಾನದ ವಿವರಗಳು ಕೆಳಕಂಡಂತಿದೆ.<br>ರೂ. ಕೋಟಿಗಳಲ್ಲಿ
<table>
<tr><th>ಆರ್ಥಿಕ ವರ್ಷ</th><th>ರಾಜ್ಯಕ್ಕೆ ಸ್ವೀಕೃತವಾಗಿರುವ ಸಹಾಯಾನುದಾನ</th></tr>
<tr><td>2020-21</td><td>16,287</td></tr>
<tr><td>2021-22</td><td>20,986</td></tr>
<tr><td>2022-23</td><td>23,319</td></tr>
<tr><td>2023-24</td><td>23,226</td></tr>
<tr><td>2024-25</td><td>22,493</td></tr>
</table>
ಕೇಂದ್ರ ಸರ್ಕಾರವು ಆಯವ್ಯಯವನ್ನು ಅಂದಾಜಿಸುವಾಗ ಸಹಾಯಾನುದಾನವನ್ನು ರಾಜ್ಯವಾರು ಅಂದಾಜಿಸುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದಿಂದ ಬಿಡುಗಡೆಗೆ ಬಾಕಿಯಿರುವ ಸಹಾಯಾನುದಾನ ಎಷ್ಟಿದೆ ಎಂಬುದನ್ನು ಹೇಳಲು ಬರುವುದಿಲ್ಲ. ಆದರೆ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಬಿಡುಗಡೆಯಾಗುವ ಸಹಾಯಾನುದಾನವು ಯೋಜನೆಗಳ ಸಮರ್ಪಕ ಅನುಷ್ಠನಕ್ಕಾಗಿ ಸಾಕಾಗುವುದಿಲ್ಲ. ಆದಕಾರಣ ಈ ಯೋಜನೆಗಳಿಗೆ ರಾಜ್ಯ ಸರ್ಕಾರ ತನ್ನ ನಿಗದಿತ ಪಾಲನ್ನು ಬಿಡುಗಡೆ ಮಾಡುವುದರ ಜೊತೆಗೆ ಹಲವು ಯೋಜನೆಗಳಲ್ಲಿ ಹೆಚ್ಚುವರಿ ಪಾಲನ್ನು ಬಿಡುಗಡೆ ಮಾಡುತ್ತದೆ ಉದಾಹರಣೆಗೆ ಸರ್ವಶಿಕ್ಷಣ ಅಭಿಯಾನ, ಮಧ್ಯಾಹ್ನದ ಬಿಸಿ ಊಟ ಯೋಜನೆ, ಆಯುಷ್ಮಾನ್ ಭಾರತ, ಸಾಮಾಜಿಕ ಭದ್ರತಾ ಪಿಂಚಣಿ, ಕೃಷಿ ಸಿಂಚಯಿ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಾಗೂ ಇತರೆ ಯೋಜನೆಗಳು.<br>
ವರ್ಷದಿಂದ ವರ್ಷಕ್ಕೆ ಕೇಂದ್ರ ಸರ್ಕಾರದಿಂದ ಸ್ವೀಕೃತವಾಗುವ ಸಹಾಯಾನುದನದಲ್ಲಿ ಯಾವುದೇ ಬೆಳವಣಿಗೆ ಆಗಿರುವುದಿಲ್ಲ. ಕಳೆದ 4 ವರ್ಷಗಳಲ್ಲಿ ಕೇಂದ್ರ ಸರ್ಕಾರದ ಆಯವ್ಯಯ ಗಾತ್ರ ಶೇ.7.5 ರಷ್ಟು (CAGR) ಹೆಚ್ಚಳವಾಗಿದ್ದರೆ, ಕೇಂದ್ರ ಸರ್ಕಾರದದಿಂದ ರಾಜ್ಯಕ್ಕೆ ಬಿಡುಗಡೆಯಾಗುವ ಸಹಾಯಾನುದಾನವು</td></tr>
</table>

| | | |
|---|---|---|
| | | ಕಳೆದ 4 ವರ್ಷಗಳಲ್ಲಿ ಶೇ.2.3ರಷ್ಟು (CAGR) ಮಾತ್ರ ಹೆಚ್ಚಳವಾಗಿರುತ್ತದೆ. ವರ್ಷದಿಂದ ವರ್ಷಕ್ಕೆ ಕೇಂದ್ರ ಸರ್ಕಾರ ಆಯವ್ಯಯ ಹೆಚ್ಚಾಗುತ್ತಿದೆ. ಆದರೆ ರಾಜ್ಯಗಳಿಗೆ ಬಿಡುಗಡೆಯಾಗುವ ಸಹಾಯಾನುದಾನವು ಆಯವ್ಯಯ ಹೆಚ್ಚಳಕ್ಕೆ ಅನುಗುಣವಾಗಿ ಹೆಚ್ಚಳವಾಗಿರುವುದಿಲ್ಲ. |
| ಇ) | ಕೇಂದ್ರ ಸರ್ಕಾರ ತೆರಿಗೆ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಹೆಚ್ಚು ತೆರಿಗೆ ಪಾವತಿಸಲು ರಾಜ್ಯ ಸರ್ಕಾರ ಬೇಡಿಕೆ ಇಟ್ಟಿದೆಯೇ; ಇತರೆ ರಾಜ್ಯಗಳಿಗೆ ಅನುಗುಣವಾಗಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ ತೆರಿಗೆ ಹಣವನ್ನು ಹಂಚಿಕೆ ಮಾಡುತ್ತಿದೆಯೇ; | ಕೇಂದ್ರ ಸರ್ಕಾರವು 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ರಾಜ್ಯಕ್ಕೆ ತೆರಿಗೆ ಹಂಚಿಕೆ ಮಾಡುತ್ತಿದೆ.<br>ಕೇಂದ್ರದಿಂದ ರಾಜ್ಯಕ್ಕೆ ಹಂಚಿಕೆಯಾಗುವ ತೆರಿಗೆ ಪಾಲನ್ನು ಒಟ್ಟು ಹಂಚಿಕೆಯಾಗುವ ರಾಜಸ್ವದಲ್ಲಿ ಶೇ.4.71 ರಷ್ಟನ್ನು ಕರ್ನಾಟಕ ರಾಜ್ಯಕ್ಕೆ ನೀಡಬೇಕೆಂದು 14ನೇ ಹಣಕಾಸು ಆಯೋಗವು ಶಿಫಾರಸು ಮಾಡಿತು. ಆದರೆ, 15ನೇ ಹಣಕಾಸು ಆಯೋಗವು ಈ ಹಂಚಿಕೆಯನ್ನು ಶೇ.3.65ಕ್ಕೆ ಇಳಿಕೆ ಮಾಡಿತು. ಇದರಿಂದ ರಾಜ್ಯಕ್ಕೆ ಕಳೆದ 5 ವರ್ಷಗಳಲ್ಲಿ ವಾರ್ಷಿಕ ಸುಮಾರು 12,000 ಕೋಟಿ ರೂ.ಗಳು ನಷ್ಟವಾಗಿರುತ್ತದೆ. ರಾಜ್ಯಕ್ಕಾಗಿರುವ ಈ ತೆರಿಗೆ ನಷ್ಟವನ್ನು ಸರಿ ಪಡಿಸಲು ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಲಾಗಿರುತ್ತದೆ. ಅಲ್ಲದೆ, ರಾಜ್ಯಕ್ಕೆ ಹೆಚ್ಚಿನ ತೆರಿಗೆ ಹಂಚಿಕೆಯನ್ನು ನೀಡಬೇಕು ಎಂದು 16ನೇ ಹಣಕಾಸು ಆಯೋಗಕ್ಕೆ ಜ್ಞಾಪನ ಪತ್ರವನ್ನು ಸಲ್ಲಿಸಿರುತ್ತದೆ. |
| ಈ) | ಹಣಕಾಸು ಆಯೋಗದ ಶಿಫಾರಸ್ಸಿಗೆ ಅನುಗುಣವಾಗಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡಿದೆಯೇ: ಬಿಡುಗಡೆ ಮಾಡದೇ ಇದ್ದಲ್ಲಿ ಇದಕ್ಕೆ ಕಾರಣವೇನು; | ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ಕೇಂದ್ರ ಸರ್ಕಾರ ರಾಜ್ಯಕ್ಕೆ ತೆರಿಗೆ ಪಾಲನ್ನು ಬಿಡುಗಡೆ ಮಾಡಿರುತ್ತದೆ. |
| ಉ) | ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದ ತೆರಿಗೆ ಹಂಚಿಕೆಯ ಅನ್ಯಾಯ ಸರಿಪಡಿಸಲು ಕರ್ನಾಟಕ ಎಷ್ಟು ಬಾರಿ ಮನವಿ ಮಾಡಿರುತ್ತದೆ; ಇದಕ್ಕೆ ಕೇಂದ್ರ ಸರ್ಕಾರದಿಂದ ಸ್ವೀಕರಿಸಿರುವ ಉತ್ತರವೇನು? | ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕಾಗಿರುವ ನಷ್ಟವನ್ನು ಸರಿ ಪಡಿಸಲು ಮತ್ತು 15ನೇ ಹಣಕಾಸು ಆಯೋಗವು ರಾಜ್ಯಕ್ಕೆ ಶಿಫಾರಸ್ಸು ಮಾಡಿದ್ದ 5,495 ಕೋಟಿ ರೂ.ಗಳ ವಿಶೇಷ ಅನುದಾನ ಮತ್ತು 6,000 ಕೋಟಿ ರೂ.ಗಳ ರಾಜ್ಯ ಕೇಂದ್ರಿತ ಅನುದಾವನ್ನು ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು, ರಾಜ್ಯದ ಸಂಸದರು ಹಾಗೂ ಶಾಸಕರು ನೇರವಾಗಿ ಪ್ರಧಾನ ಮಂತ್ರಿಯವರಿಗೆ ಮತ್ತು ಕೇಂದ್ರ ಹಣಕಾಸು ಸಚಿವರನ್ನು ಭೇಟಿಯಾಗಿ ತೆರಿಗೆ ನಷ್ಟವನ್ನು ಸರಿಪಡಿಸುವಂತೆ ಮನವಿ ಮಾಡಿರುತ್ತಾರೆ.<br>ರಾಜ್ಯ ಸರ್ಕಾರ ಹಲವು ಬಾರಿ ಮನವಿ ಮಾಡಿದರೂ ಸಹ ಕೇಂದ್ರ ಸರ್ಕಾರ ರಾಜ್ಯದ ತೆರಿಗೆ ಹಂಚಿಕೆಯನ್ನು ಹೆಚ್ಚಿಸಿರುವುದಿಲ್ಲ. ಅಲ್ಲದೆ, 15ನೇ ಹಣಕಾಸು ಆಯೋಗವು ರಾಜ್ಯಕ್ಕೆ ಶಿಫಾರಸ್ಸು ಮಾಡಿದ್ದ ವಿಶೇಷ ಅನುದಾನವನ್ನು ಸಹ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವುದಿಲ್ಲ.<br>ರಾಜ್ಯಕ್ಕೆ ಹೆಚ್ಚಿನ ತೆರಿಗೆ ಹಂಚಿಕೆಯನ್ನು ನೀಡುವಂತೆ 16ನೇ ಹಣಕಾಸು ಆಯೋಗಕ್ಕೆ ರಾಜ್ಯ ಸರ್ಕಾರವು ಜ್ಞಾಪನ ಪತ್ರವನ್ನು ಸಲ್ಲಿಸಿರುತ್ತದೆ. |

**ಸಂಖ್ಯೆ: FD/133/2025-DS-BR-FINANCE DEPT.SEC**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ